ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ ಎಸ್ ಪಿ ವಕೀಲರಿಂದಃ

ನಿಪಿ-1 ಕ್ರಯಪತ್ರದ ಬಗ್ಗೆ ಸಂಪೂರ್ಣವಾಗಿ ನಾನು ತಿಳಿದುಕೊಂಡಿರುತ್ತೇನೆ. ನಿಪಿ-1 ರ ಖಂಡಿಕೆ 3 ರ 6 ನೇ ಸಾಲಿನಲ್ಲಿ ಹೇಳಿರುವಂತೆ ದಿನಾಂಕಃ12.06.2008 ರಂದು 1 ನೇ ಪುಸ್ತಕ ಸಿ ಡಿ ನಂಃ78 ನೋಂದಣಿ ಸಂಖ್ಯೆಃ ಆರ್ ಎಂ ಎನ್ ಡಿ-1-00970.2008-09 ರ ಕ್ರಯಪತ್ರದ ಮೂಲಕ ಸ್ವಾಯಾರ್ಜಿತವಾಗಿ ಪ್ರತಿವಾದಿಯವರಿಗೆ ಬಂದಂತಹ ಸ್ವತ್ತಾಗಿತ್ತು ಎಂದು ಬರೆಯಲಾಗಿರುತ್ತದೆ ಆದರೆ ಅದರಂತೆ ಪ್ರತಿವಾದಿಯವರಿಗೆ ದಾವಾ ಆಸ್ತಿ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ಷೆಡ್ಯೂಲ್ ನಲ್ಲಿ ಖಾತೆ ಸಂಖ್ಯೆಃ 1338/832/21 ಎಂದು ಬರೆದಿದ್ದು ಕರಾರುಪತ್ರ ಆಗುವ ಸಮಯದಲ್ಲಿ ಪ್ರತಿವಾದಿಯವರ ಹೆಸರಿಗೆ ಸದರಿ ನಂಬರ್ ನಂತೆ ಖಾತೆ ಆಗಿರಲಿಲ್ಲ ಎಂದರೆ ಸಾಕ್ಷಿಯು ಮೊದಲಿಗೆ ಗ್ರಾಮಠಾಣದಲ್ಲಿ ಆಗಿದ್ದು ಆದರೆ ಪುರಸಭೆಯಲ್ಲಿ ಆಗಿರಲಿಲ್ಲ ಎಂದು ನುಡಿದು, ಮುಂದುವರೆದು ಎಲ್ಲವನ್ನು ಅವರೇ ಬರೆಸಿಕೊಟ್ಟಿರುವುದಾಗಿ ನುಡಿಯುತ್ತಾರೆ. ನಿಪಿ-1 ರಲ್ಲಿ ಇರುವ ಒಕ್ಕಣೆಯನ್ನು ಪ್ರತಿವಾದಿಯರೇ ಬರೆಸಿರುತ್ತಾರೆ. ಸಾಕ್ಷಿಗೆ ನಿಪಿ-1 ದಾಖಲೆಯನ್ನು ಪ್ರತಿವದಿಯವರೇ ಹೇಳಿ ಬರೆಸಿರುವುದರಿಂದ ಸದರಿ ದಾಖಲೆಯಲ್ಲಿ ಬರೆದಿರುವ ಅಂಶಗಳು ನಿಮಗೆ ತಿಳಿದಿಲ್ಲ ಎಂದರೆ ಸಾಕ್ಷಿಯು ಓದಿಸಿ ಕೇಳಿ ತಿಳಿದುಕೊಂಡಿರುವುದಾಗಿ ನುಡಿಯುತ್ತಾರೆ. ಓದಿ ಹೇಳಿಸಿದ ನಂತರ ನೀವೇನಾದರೂ ಖಾತೆ ಪ್ರತಿವಾದಿಯವರ ಹೆಸರಿನಲ್ಲಿ ಇರುವ ಬಗ್ಗೆ

ನೋಡಿರುತ್ತೀರಾ ಎಂದರೆ ಸಾಕ್ಷಿಯು ಅವರಿಗೆ ಹಣದ ಅಗತ್ಯತೆ ತುರ್ತಾಗಿ ಇದ್ದರಿಂದ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಗ್ರಾಮಠಾಣಾದಲ್ಲಿ ದಾವಾ ಆಸ್ತಿಯು ಪ್ರತಿವಾದಿಯವರ ಹೆಸರಿನಲ್ಲಿ ಖಾತೆಯಾಗಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ನಿಪಿ-1 ಕರಾರು ಪತ್ರದ ವಾಯಿದೆ ಮುಗಿಯುವ ಒಳಗೆ ನೀವೇನಾದರೂ ಪ್ರತಿವಾದಿಯವರಿಗೆ ವಕೀಲರ ಮೂಲಕ ನೋಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ ಕೇಳಿ ನೋಟೀಸನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು 18 ತಿಂಗಳ ಒಳಗೆ ನೀಡಿರುವುದಿಲ್ಲ ನಂತರ ನೀಡಿರುವುದಾಗಿ ನುಡಿಯುತ್ತಾರೆ. ನಾನು ಪ್ರತಿವಾದಿಯವರಿಗೆ ನೋಟೀಸನ್ನು 18 ತಿಂಗಳ ವಾಯಿದೆ ಮುಗಿದ 7-8 ತಿಂಗಳು ಬಿಟ್ಟು ನೋಟೀಸನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ 2018 ರ ಸಾಲಿನಲ್ಲಿ ನೀವು ಮೊಬೈಲನ್ನು ಬಳಸುತ್ತಿದ್ದಿರಾ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈಗ ನಾನು ಉಪಯೋಗಿಸುತ್ತಿರುವ ಮೊಬೈಲ್ ಫೋನನ್ನು 4 ವರ್ಷದಿಂದ ಉಪಯೋಗಿಸುತ್ತಿದ್ದೇನೆ.

ನಿಪಿ-1 ದಾಖಲೆಯಲ್ಲಿ 1ನೇ ಸಾಕ್ಷಿದಾರರಾಗಿ ಸಹಿ ಮಾಡಿರುವ ಕೃಷ್ಣಪ್ಪ ಬಿನ್ ಸಿದ್ದಯ್ಯ ಎಂಬುವವರು ನನ್ನ ಭಾವ ಎಂದರೆ ಸರಿ. ಸದರಿ

ಕರಾರುಪತ್ರಕ್ಕೆ ಸಂಬಂಧಪಟ್ಟ ಎಲ್ಲಾ ವ್ಯವಹಾರದ ಬಗ್ಗೆ ಸದರಿ ಕೃಷ್ಣಪ್ಪನವರಿಗೆ ತಿಳಿದಿರುತ್ತದೆ ಎಂದರೆ ಸರಿ. ಈ ಹಿಂದೆ ನನ್ನ ಸಾಕ್ಷಿಯಲ್ಲಿ 2016 ರಲ್ಲಿ ಸೈಟ್ ಮಾರಾಟ ದಿಂದ ರೂ.10 ಲಕ್ಷ ಹಣ ಬಂದಿರುವುದಾಗಿ ತಿಳಿಸಿದ್ದು, ಸದರಿ ಹಣದಲ್ಲಿ ರೂ.7 ಲಕ್ಷ ಹಣವು ನನ್ನ ಖಾತೆಗೆ ಜಮವಾಗಿರುತ್ತದೆ ಉಳಿಗೆ ರೂ. 3 ಲಕ್ಷ ನಗದಾಗಿ ನನಗೆ ನೀಡಲಾಗಿತ್ತು ಎಂದು ನುಡಿಯುತ್ತಾರೆ. ಸದರಿ 3 ಲಕ್ಷ ನಗದುಹಣವನ್ನು ಪುನಃ ನನ್ನ ಖಾತೆಗೆ ಜಮಾ ಮಾಡಿಕೊಂಡಿರುತ್ತೇನೆ. ಸಾಕ್ಷಿಗೆ ಸದರಿ 10 ಲಕ್ಷ ಹಣವನ್ನು ಎಷ್ಟು ದಿನಗಳ ಕಾಲ ನಿಮ್ಮ ಖಾತೆಯಲ್ಲಿ ಇತ್ತು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ದಾಖಲಾತಿ ಬೇಕಾದರೆ ಹಾಜರು ಪಡಿಸುವುದಾಗಿ ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.